**ಒ ಎಸ್ ನಂ. 69/2022**
**ಪಿ ಡಬ್ಲ್ಯೂ: 01**

**ದಿ: 04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಎಸ್ ಜಿ ಎನ್ ವಕೀಲರಿಂದ:**

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಕನ್ನಡ ಅಕ್ಷರಗಳು ಸ್ವಲ್ಪ ಗೊತ್ತಾಗುತ್ತವೆ ಸ್ವಲ್ಪ ಗೊತ್ತಾಗುವುದಿಲ್ಲ. ಶಿವಕ್ಕ ಬೈರಪ್ಪ ತಡಸ ನಮ್ಮ ಅಕ್ಕ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅವರ ಹೆಸರು ನಿರ್ಮಲಾ ಬೈರಪ್ಪ ತಡಸದ ಎಂದು ಕಾಣಿಸಲಾಗಿದೆ. ಈ ರೀತಿಯಾಗಿ ಅವರ ಹೆಸರು ಬರೆಸಲಾಗಿದೆ. ನಿಪಿ-1 ರಲ್ಲಿ ದಾಖಲ ಇರುವ ಅದರಗುಂಚಿ ನೀಲವ್ವ, ಮುದಿಗೌಡ ಸಾವಕ್ಕ, ಜೇರಿಗವಾಡ ಶಾಂತವ್ವ, ಚನ್ನವ್ವ ದಳವಾಯಿ, ಭೀಮಪ್ಪ ದಳವಾಯಿ ಇವರ ಹೆಸರುಗಳು ಇರುತ್ತವೆ. ಸದರಿಯವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುತ್ತದೆ. ಸದರಿಯವರನ್ನು ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರದ್ದು ಹಿಸ್ಸೆ ಬೇರೆ ಇದೆ ಎನ್ನುತ್ತಾರೆ. ಅವರಿಗೆ ಸಂಬಂಧಿಸಿದ ಬೇರೆ ಹಿಸ್ಸೆ ಎಂದು ತೋರಿಸಲು ದಾಖಲೆ ಹಾಜರ ಪಡಿಸಿದ್ದೇನೆ. ಆಸ್ತಿಗಳು ಬೇರೆ ಬೇರೆ ಎಂದು ತೋರಿಸಲು ನಕ್ಷೆ ಆಗಿಲ್ಲ.

2016 ರಲ್ಲಿ ನಮ್ಮ ಮಧ್ಯ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಗೂ ನಮ್ಮ ಸಹೋದರಿಯರು ಪ್ರತಿವಾದಿಯರಿಗೆ ನಮ್ಮ ಪಾಲಿನ ಹಿಸ್ಸೆಯನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಹೆಸರನ್ನು ದಾಖಲಿಸಿಕೊಂಡಿರುವುದನ್ನು ನಾವು ಎಲ್ಲಿಯೂ ಪ್ರಶ್ನಿಸಿಲ್ಲ. ದಾವೆ ಸಲಿಲಸುವಾಗ ಉತಾರದಲ್ಲಿ ನಮ್ಮ ತಂದೆ ಹೆಸರು ಇತ್ತು. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಈಗಾಗಲೇ ಪಾಲು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು 2022 ರಲ್ಲಿ ಪ್ರತಿವಾದಿಯರನ್ನು ಹಣ ಕೊಡುವಂತೆ ಕೇಳಿದ್ದರಿಂದ ಅವರು ನಿರಾಕರಿಸಿದ್ದರಿಂದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೆ ಹಕ್ಕು ಇಲ್ಲದಿದ್ದರೂ ಕೂಡಾ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಹಿರಿಯರ ಸಮಕ್ಷಮ ಮಾತುಕತೆ ಆಗಿದ್ದು ನಾವು ಒಪ್ಪಿಕೊಂಡಿದ್ದರಿಂದ ವಾಟ್ನಿ ಪತ್ರ ಹಾಗೂ ಹಕ್ಕು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಹಿರಿಯರನ್ನು ಕೂಡಿಸಿದಾಗ ನಾವು ಹಾಗೂ ಪ್ರತಿವಾದಿಯರು ಒಪ್ಪಿಕೊಂಡಿಲ್ಲ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಪಂಚಾಯತಿ ಸಮಯದಲ್ಲಿ ಸೇರಿದ ಹಿರಿಯರು ಮಹದೇವಪ್ಪ ಮನಗುಂಡಿ ಇದ್ದರು. ನನಗೆ ಕಲ್ಲಪ್ಪ ಮನಗುಂಡಿ, ಸಿಂತ್ರೆ, ಈರಯ್ಯ ರವರ ಪರಿಚಯ ಇದೆ. ಸುರೇಖಾ, ನಭಿಸಾಬಾ ನಧಾಪ, ಹನಮಂತ, ಬಿ ಎಂ ಬಡಿಗೇರ ನಮ್ಮ ಊರಿನವರು. ಈಗ ಹೇಳಿದ ಹಿರಿಯರು ಮಾತು ಕತೆ ಮಾಡಿದ್ದು ಪ್ರತಿವಾದಿಯರು ಹಿರಿಯರಿಗೆ ಬೆಲೆ ಕೊಟ್ಟಿಲ್ಲ ಎನ್ನುತ್ತಾರೆ. ಸದರಿ ಮಾತುಕತೆ ನಮ್ಮ ಮನೆಯಲ್ಲಿ ಆಗಿರುತ್ತದೆ. ಮಾತುಕತೆಯಲ್ಲಿ ಪ್ರತಿವಾದಿಯರು ನಾವು ಕೊಡುವುದಿಲ್ಲ ಎಂದು ಹಿರಿಯರಿಗೆ ಹೇಳಿರುತ್ತಾರೆ. 2016 ರಲ್ಲಿ ಮಾತುಕತೆ ಆಗಿತ್ತು ಎಂದರೆ ನಿಜ. ನಾವು ಆ

ಸಮಯದಲ್ಲಿ ಸಹಿ ಮಾಡಿರುವುದಿಲ್ಲ. ಪಾಲು ಆಗಿಲ್ಲ ಎಂದು ತೋರಿಸಲು ಹಿರಿಯರನ್ನು ವಿಚಾರಣೆ ಮಾಡಲು ಯಾವುದೆ ತೊಂದರೆ ಇಲ್ಲ. ವಾಟ್ನಿ ಪತ್ರ ಹಾಗೂ ಹಕ್ಕುಪತ್ರಕ್ಕೆ ಹಿರಿಯರು ಸಹಿ ಮಾಡಿರುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ದಾಖಲೆ ಸಲ್ಲಿಸಿದ ನಂತರ ವಿಚಾರಿಸಿದಾಗ ನಮ್ಮ ಹತ್ತಿರ ಬರಬೇಡಿ ಎಂದು ಹೇಳಿದ್ದಾರೆ. ನಾವು ಹಿರಿಯರ ಸಮಕ್ಷಮ ಒಪ್ಪಿಕೊಂಡು ಪಾಲು ಮಾಡಿಕೊಂಡಿದ್ದು ಸಹಿ ಮಾಡಿದ್ದರೂ ಕೂಡಾ 2022 ರಲ್ಲಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**